


ಎಡದಿಂದ ಬಲಕ್ಕೆ :

1. ಓದುವ ವಿಧಾನದಲ್ಲೂ ಉಂಟು ಬಗೆ ಬಗೆ (4)
3. ವಿನಯಶೀಲನಾಗದಿದ್ದರೆ ಎಲ್ಲ ಹಾಳು ಹಾಳು (3)
4. ಮನಸು ಒಪ್ಪುವಂತೆ ರಚನೆ ಮಾಡು (3)
6. ಮದನಿಕೆಯ ಜೊತೆಗೆ ಯಾವುದು ಈ ಪಂಚತಂತ್ರದ ಪ್ರಾಣಿ ? (4)
7. ನೂರಾರು ತರಹದ ಪ್ರಯತ್ನಗಳು ನಡೆದಿವೆ , ಎಡೆಬಿಡದೆ (4)
9. ಕಾಡಿನ ಅರಸನಿಗೆ ಸಸ್ಯ ಮೂಲದ್ದೇ ತುಪ್ಪ (4)
11. ಕೈಯಲ್ಲೊಂದು ದೊಣ್ಣೆ ಹಿಡಿದು ಸೇನಾ ನಾಯಕನಾದ (4)
13. ವಿರಸಕ್ಕೆ ಕಾರಣವಾದದ್ದೂ ಸೇರಿ ಒಂಭತ್ತು ವಿಧ ಕಾವ್ಯ ರುಚಿ (4)
15. ನಂಬುವುದೇ ಸಾಧ್ಯವಿಲ್ಲ , ಅಂತಹ ಭಾರೀ ಕಾಡುಕಿಚ್ಚು (4)
17. ನೇರಳೆ ಮರವನ್ನು ಅಲಂಕರಿಸಲು ತಾವರೆ ಬೇಕೇ? (3)
18. ಆ ಓಲೆಯಲ್ಲಿರುವ ಬಣ್ಣ ಬಣ್ಣ ಒಟ್ಟಾರೆ ಅದ್ಭುತ ಚೆಲುವು (3)
19. ಆ ವಟಾರದ ತುಂಬ ಕಪ್ಪೆಗಳದೇ ಶಬ್ದ (4)

ಮೇಲಿಂದ ಕೆಳಕ್ಕೆ :

1. ವಿಷಯದ ಎಲ್ಲ ವಿವರಗಳೂ ಸ್ಪಷ್ಟ (3)
2. ಖಾದಿಯನ್ನೇ ಧರಿಸುತ್ತಾನೆ ಆ ಸಿರಿವಂತ (3)
3. ದೇವತೆಗಳನ್ನು ಸೃಷ್ಟಿಸಿದವನೂ ಬ್ರಹ್ಮನೇ ಹೌದೇ (3)
5. ಸಾಮಾನ್ಯದ್ದಲ್ಲ , ಆಕೆಯದು ತುಂಬ ನಿರ್ಮಲ ಚಿತ್ತ (3)
7. ನಿಂದನೆಯ ದನಿ ಜೊತೆಗೆ ಭಾರೀ ಶಬ್ದ ಬೇರೆ (3)
8. ಜಾರಿಕೆಯ ಮಾತಾಡಿ ಹೊರಬಂದ ಅಗಸ ಗೊತ್ತೇ ? (3)
9. ವಿಂಧ್ಯಾಚಲವನ್ನು ನೋಡಿದ್ದೇ ತಡ, ಹೇಗಾಯಿತು ಮುಖ ? (3)
10. ಸಮಮಿತಿ ಬದಲಿಸಲು ಸಿಕ್ಕಿದ್ದ ಒಪ್ಪಿಗೆ ಬುಡಮೇಲು (3)
12. ಯುವಜನರಿಗೆ ಪರಿಚಯವೇ ಇಲ್ಲದ ಹೋಮ ಪೂಜೆ (3)
14. ವರ್ಣನೆಗೆ ನಿಲುಕದಂಥ ಶ್ರೇಷ್ಠ ಹೇಗೆ ? (3)
15. ವಂದನೆ ಏನೆಂದು ತಿಳಿದೇ ಇಲ್ಲದ ರಾಕ್ಷಸ (3)
16. ಲಾಠಿಯಲ್ಲಿ ಏಟು, ಸೀಳಿತು ಹಣೆ (3)

### 10-11-2016ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಧಿಪತಿ 3. ನೀರವ 4. ರುಸುಮು 6. ನಿರ್ಧಾರಕ 7. ಸದಾಕಾಲ 8. ನಸುನಗು 10. ನವ್ಯಕಾವ್ಯ 12. ಪರಿಕರ 14. ಅಮಾಯಕ 16. ನುಸುಳು 17. ವಿಹಾರಿ 18. ಕುಟಿಲತೆ

ಮೇಲಿಂದ ಕೆಳಕ್ಕೆ:

1. ಅವನ 2. ತಿರುಕ 3. ನೀಳಕಾಯ 5. ಮುನಿಸು 7. ಸಮಾಧಾನ 9. ಗುರುತರ 11. ಕಾನೂನು 13. ಸರಿದಾರಿ 14. ಅಳುಕು 15. ಕವಿತೆ

## ಪ್ರಶ್ನಾ ೦ಕಣ


# ಏನಿದು ಗ್ರೀನ್ ಲ್ಯಾಂಡ್ ಶಾರ್ಕ್?

ಧರೆಯ ಪ್ರಾಣಿ ಸಾಮ್ರಾಜ್ಯದಲ್ಲಿ ಈವರೆಗೆ ಗುರುತಿಸಲಾಗಿರುವ ಸುಮಾರು ಹದಿನಾಲ್ಕು ಲಕ್ಷ ಪ್ರಭೇದಗಳನ್ನು ಎರಡು ವರ್ಗಗಳನ್ನಾಗಿ ವಿಂಗಡಿಸಲಾಗಿದೆ : ಬೆನ್ನೆಲುಬಿನಿಂದ ಕೂಡಿದ 'ಕಶೇರುಕ' ಗಳು ಮತ್ತು ಬೆನ್ನೆಲುಬಿಲ್ಲದ 'ಅಕಶೇರುಕ' ಗಳು. ಮನುಷ್ಯರನ್ನೂ ಒಳಗೊಂಡಿರುವ ಕಶೇರುಕ ವರ್ಗದ 'ಅತ್ಯಂತ ದೀರ್ಘಾಯುಷಿ' ಎಂಬ ವಿಶ್ವ ದಾಖಲೆಯ ಪ್ರಾಣಿಯಾಗಿರುವುದೇ ಗ್ರೀನ್ ಲ್ಯಾಂಡ್ ಶಾರ್ಕ್ (ಚಿತ್ರ 1) ನ ಪರಮ ವಿಶೇಷ.

ಕಶೇರುಕ ಪ್ರಾಣಿ ವರ್ಗದಲ್ಲಿ ದೀರ್ಘಾಯುಷಿ ವಿಧ ಪ್ರಭೇದಗಳು ಹಲವಾರಿವೆ. ಆನೆಗಳು 80 ವರ್ಷಗಳವರೆಗೂ ಬದುಕುತ್ತವೆ (ಗರಿಷ್ಠ ದಾಖಲೆ 86 ವರ್ಷ) ; ಮನುಷ್ಯರದು ಸರಾಸರಿ 71 ವರ್ಷ ಆಯುಷ್ಯ (ಗರಿಷ್ಠ ದಾಖಲೆ 122 ವರ್ಷ) ; ಮಕಾ ಗಿಳಿಗಳದು 60 ರಿಂದ 80 ವರ್ಷಗಳ ಜೀವಿತ. ಗ್ಯಾಲಪಗಾಸ್ ದ್ವೀಪದ ನೆಲದ ಆಮೆಗಳು ( ಚಿತ್ರ 2 ) ನೂರ ಐವತ್ತು ವರ್ಷ ಕಾಲ ಬದುಕಿರುತ್ತವೆ. ಸಾಗರ ವಾಸಿ ಸ್ತನಿ ವರ್ಗದ 'ಬಿಲ್ಲು ತಲೆ ತಿಮಿಂಗಿಲ' ದ ಆಯುರ್ಮಾನ ಸರಾಸರಿ 200 ವರ್ಷ. ಅದರ ಈವರೆಗಿನ ಗರಿಷ್ಠ ದಾಖಲೆ 212 ವರ್ಷ !

ದೀರ್ಘಾಯುಷ್ಯದ ಈ ಎಲ್ಲ ದಾಖಲೆಗಳನ್ನು ಶತಮಾನಗಳ ಅವಧಿಯಷ್ಟು ಹಿಂದಕ್ಕೆ ಹಾಕಿರುವುದು ಗ್ರೀನ್ ಲ್ಯಾಂಡ್ ಶಾರ್ಕ್ ನ ವೈಶಿಷ್ಟ್ಯ. ಈ ಪ್ರಾಣಿಯ ಈ ವಿಸ್ಮಯದ ವಿಶೇಷ ಪತ್ತೆಯಾದದ್ದೂ ತೀರ ಇತ್ತೀಚೆಗೆ ಒಂದೆರಡೇ ತಿಂಗಳ ಹಿಂದೆ ಅಷ್ಟೆ. ಬೃಹತ್ ಮೀನುಗಾರಿಕಾ ಬಲೆಗಳಿಗೆ ಆಕಸ್ಮಿಕವಾಗಿ ಸಿಲುಕಿ ಮೃತವಾದ 28 ಈ ಶಾರ್ಕ್ ಗಳ ಕಣ್ಣಿನ ಮಸೂರದ ಜೀವಕೋಶಗಳ 'ರೇಡಿಯೋ ಕಾರ್ಬನ್ ಡೇಟಿಂಗ್' ತಂತ್ರ ಬಳಸಿದ ವೈಜ್ಞಾನಿಕ ವಿಶ್ಲೇಷಣೆಯಿಂದ ನಿರ್ಧರಿಸಲಾದಂತೆ ಅವುಗಳ ಕನಿಷ್ಠ ಮತ್ತು ಗರಿಷ್ಠ ವಯೋಮಾನ ಕ್ರಮವಾಗಿ 272 ಮತ್ತು 512 ವರ್ಷ! ಹಾಗಾಗಿ ಗ್ರೀನ್ ಲ್ಯಾಂಡ್ ಶಾರ್ಕ್ ಗಳ ಸರಾಸರಿ ಆಯುಷ್ಯ ವಿಶ್ವ ದಾಖಲೆಯ ನಾಲ್ಕುನೂರು ವರ್ಷ!

ಗ್ರೀನ್ ಲ್ಯಾಂಡ್ ನ ಆಸುಪಾಸಿನ ಆರ್ಕ್ ಟಿಕ್ ಸಾಗರ ಮತ್ತು ಉತ್ತರ ಅಟ್ಲಾಂಟಿಕ್ ಸಾಗರಾವಾರಗಳಲ್ಲಿ ಮೇಲ್ಮೈಯಿಂದ ಎರಡು ಕಿ.ಮೀ. ಗೂ ಅಧಿಕ ಆಳದ, ತೀವ್ರ ಒತ್ತಡದ, ಗಾಢಾಂಧಕಾರದ ಕೊರೆವ ಶೀತಲ ಜಲ




ಪ್ರದೇಶಗಳಲ್ಲಿ ಈ ಶಾರ್ಕ್ ಗಳದು ವಾಸ. ಗ್ರೀನ್ ಲ್ಯಾಂಡ್ ಶಾರ್ಕ್ ಗಳದು ಬೃಹತ್ ಗಾತ್ರದ , ಹದಿನೆಂಟು ಇಪ್ಪತ್ತು ಅಡಿ ಉದ್ದದ ಕಂದು ಬಣ್ಣದ ಶರೀರ; ಚಿಕ್ಕ ಚಿಕ್ಕ ಈಜು ರೆಕ್ಕೆಗಳು, ಮರಳು ಕಾಗದದಂತಹ ಚರ್ಮ, ಅಂಧತ್ವಕ್ಕೇ ಸಮೀಪವಾದ ಮಂದ ದೃಷ್ಟಿ. ವರ್ಷಕ್ಕೆ ಒಂದು ಸೆಂ.ಮೀ. ನಷ್ಟೇ ಬೆಳವಣಿಗೆಯ ಈ ಪ್ರಾಣಿ ಪ್ರೌಢವಾಗುವುದೇ 150 ವರ್ಷ ವಯಸ್ಸಿನ ವೇಳೆಗೆ! ಆಳ ಕಡಲಿನ ಮತ್ಸ್ಯಗಳು ಮತ್ತು ಸ್ತನಿಗಳೇ ಈ ಬೇಟೆಗಾರ ಪ್ರಾಣಿಯ ಆಹಾರ.

ಈ ಬಗೆಯ ಮಹದಚ್ಚರಿಯ ಶರೀರ ರಚನೆ ಮತ್ತು ಜೀವನ ಚಕ್ರ ಕೂಡ ಗ್ರೀನ್ ಲ್ಯಾಂಡ್ ಶಾರ್ಕ್ ನದೇ ವೈಶಿಷ್ಟ್ಯಗಳಾಗಿವೆ.

■ ಎನ್. ವಾಸುದೇವ್